## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\2083\2018\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 07/09/2019

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಶಿವಮೊಗ್ಗ ಜಿಲ್ಲೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರೂಪಣಾಧಿಕಾರಿಗಳಾದ ಶ್ರೀ.ಜಿ.ಜಿ.ಸುರೇಶ ರವರ ದುರ್ನಡತೆಯ ಬಗ್ಗೆ.

**********

ಶಿವಮೊಗ್ಗ 6ನೇ ಕ್ರಾಸ್ ರಸ್ತೆ 6ನೇ ಮುಖ್ಯ ರಸ್ತೆ ಹೊಸಮನೆ ನಿವಾಸಿಯಾದ ಶ್ರೀ.ಚಿತ್ರಪ್ಪ ಯರಬಾಳ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಶಿವಮೊಗ್ಗ ಜಿಲ್ಲೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರೂಪಣಾಧಿಕಾರಿಗಳಾದ ಶ್ರೀ.ಜಿ.ಜಿ.ಸುರೇಶ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ಎದುರುದಾರರು 1992ರಲ್ಲಿ ಸೇವೆಗೆ ಸೇರಿಕೊಂಡು ತಮ್ಮ ಆದಾಯಕ್ಕಿಂತ ಹತ್ತು ಪಟ್ಟು ಆಸ್ತಿ ಮಾಡಿದ್ದು, ಶಿವಮೊಗ್ಗದಲ್ಲಿ ಮನೆ, ಜಮೀನು, ಬಂಗಾರ, ಓಡಾಡಲು ವಾಹನ ಇವೆಲ್ಲವನ್ನೂ ಅಕ್ರಮವಾಗಿ ಗಳಿಸಿದ್ದಾರೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ -

ತಮ್ಮ ಕುಟುಂಬವು ತಲತಲಾಂತರಗಳಿಂದ ಕೃಷಿ ಕಸುಬು ಮಾಡಿಕೊಂಡು ಬರುತ್ತಿದೆ. ತಮ್ಮ ತಂದೆ 1967ರಲ್ಲಿ ತಾಲ್ಲೂಕ್ ಬೋರ್ಡ್ ಸದಸ್ಯರಾಗಿದ್ದರು. ತಮ್ಮ ತಾಯಿ ಹುಣಸೇಕಟ್ಟೆ ಗ್ರಾಮದ ಸರ್ವೆ ನಂ.13/6ರಲ್ಲಿ 3.04 ಎಕರೆ, 13/1ರಲ್ಲಿ 3.11 ಎಕರೆ ಮತ್ತು 13/17ರಲ್ಲಿ 3.38 ಎಕರೆ ಜಮೀನನ್ನು ಖರೀದಿಸಿದ್ದಾರೆ. ತಮ್ಮ ತಾಯಿ ತಮ್ಮೊಂದಿಗೆ ವಾಸವಿದ್ದು, ಅವರ ಯೋಗಕ್ಷೇಮ ಮತ್ತು ಆರೋಗ್ಯವನ್ನು ನೋಡಿಕೊಳ್ಳುತ್ತಿದ್ದು, ಅವರ ಸ್ವಯಾರ್ಜಿತ ಆಸ್ತಿಯನ್ನು ತಮಗೆ 2002ರಲ್ಲಿ ದಾನ ಮಾಡಿಕೊಟ್ಟಿದ್ದಾರೆ.

ಬ್ಯಾಂಕ್‌ನಿಂದ ಸಾಲ ಪಡೆದು ಮನೆ ಕಟ್ಟಲು ಮತ್ತು ವಾಹನ ಖರೀದಿಸಲು ಇಲಾಖೆಯಿಂದ ಅನುಮತಿ ಪಡೆದಿರುವುದಾಗಿ ಹೇಳುತ್ತಾ, ದೂರುದಾರರ ಆಪಾದನೆಯು ಸತ್ಯಕ್ಕೆ ದೂರವಾಗಿದೆಯೆಂದು ಹೇಳಿದ್ದಾರೆ.

4. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಎದುರುದಾರರು ದಿ:07/08/1992ರಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾಗಿ ಸರ್ಕಾರಿ ಸೇವೆಗೆ ಸೇರಿದ್ದಾರೆ. ಸದರಿಯವರು ಪ್ರಸ್ತುತ ಶಿವಮೊಗ್ಗ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ;

2) ಎದುರುದಾರರು ತಮ್ಮ ತಾಯಿ ಶ್ರೀಮತಿ.ಧರ್ಮಿಬಾಯಿ ಕೋಂ ಗಂಗಾಧರ ನಾಯ್ಕ ರವರಿಂದ ಹುಣಸೇಕಟ್ಟೆ ಗ್ರಾಮದ ಸರ್ವೆ ನಂ.13/6ರಲ್ಲಿ 3.04 ಎಕರೆ, 13/1ರಲ್ಲಿ 3.11 ಎಕರೆ ಮತ್ತು 13/17ರಲ್ಲಿ 3.38 ಎಕರೆ ಒಟ್ಟು 10 ಎಕರೆ 13 ಗುಂಟೆ ಜಮೀನನ್ನು ದಿನಾಂಕ:20/12/2001ರ ನೋಂದಾಯಿತ ದಾನಪತ್ರ (ದಸ್ತಾವೇಜು ಸಂಖ್ಯೆ:3520) ದಲ್ಲಿ ದಾನ ಪಡೆದಿದ್ದಾರೆ;

3) ಕರ್ನಾಟಕ ನಾಗರೀಕ ಸೇವೆಗಳು (ನಡತೆ) ನಿಯಮಗಳು, 1966ರ ನಿಯಮ 23(2)ರನ್ವಯ ಸೂಚಿತ ಪ್ರಾಧಿಕಾರದಿಂದ ಅನುಮತಿ ಪಡೆಯದೇ, ಯಾವುದೇ ಸರ್ಕಾರಿ ನೌಕರ ಸ್ಥಿರ ಸ್ವತ್ತುಗಳನ್ನು ದಾನ ಮುಖೇನ ಪಡೆಯುವಂತಿಲ್ಲ. ಮೇಲೆ ಹೇಳಿದ ಸ್ವತ್ತುಗಳನ್ನು ಎದುರುದಾರರು ತಮ್ಮ ತಾಯಿಯಿಂದ ದಾನ ರೂಪದಲ್ಲಿ ಪಡೆಯುವ ಪೂರ್ವದಲ್ಲಿ ಸೂಚಿತ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದಿಲ್ಲ;

4) ಮನೆ ಕಟ್ಟಲು ಎದುರುದಾರರು ₹30 ಲಕ್ಷ ಸಾಲ ಪಡೆದಿರುವುದಾಗಿ ಹೇಳಿದ್ದು, ಸಾಲವನ್ನು ಪಡೆದ ದಿನಾಂಕ ಮತ್ತು ಬ್ಯಾಂಕಿನ ಹೆಸರನ್ನು ಎದುರುದಾರರು ನೀಡಿಲ್ಲ. ಸಾಲವನ್ನು ಪಡೆಯುವ ಪೂರ್ವದಲ್ಲಿ ಎದುರುದಾರರು ಸೂಚಿತ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದ ದಾಖಲೆಯಿಲ್ಲ;

5) ಎದುರುದಾರರ ಪತ್ನಿಯ ಹೆಸರಿನಲ್ಲಿರುವ ಶಿವಮೊಗ್ಗ ಮಲ್ಲೇಶ್ವರ ನಗರ (ಗುಂಡಪ್ಪ ಶೆಡ್) ವಾರ್ಡ್ ನಂ.8, 2ನೇ ಅಡ್ಡ ರಸ್ತೆಯಲ್ಲಿರುವ ನಿವೇಶನ ಸಂಖ್ಯೆ:60 (ವಿಸ್ತೀರ್ಣ 40x60 ಅಡಿ) ರಲ್ಲಿ ಎದುರುದಾರರ ಆದಾಯದ ಮೂಲ ಎಂದು ಹೇಳಲಾದ ಒಟ್ಟು ₹35,50,000/-ಗಳನ್ನು ಭರಿಸಿ ಗೃಹ ನಿರ್ಮಿಸಲು ಎದುರುದಾರರು ದಿ:04/03/11ರಂದು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರಿಂದ ಅನುಮತಿಯನ್ನು ಪಡೆದಿದ್ದಾರೆ. ಮುಂದುವರೆದು, ಗೃಹ ನಿರ್ಮಿಸಲು ಉಳಿತಾಯದ ಮೂಲ ಎಂದು ಹೇಳಲಾದ ₹14.50 ಲಕ್ಷ ಹೆಚ್ಚುವರಿ ಮೊತ್ತವನ್ನು ಭರಿಸಲು ಎದುರುದಾರರು ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರಿಂದ ದಿನಾಂಕ:08/02/12ರ ಅನುಮತಿಯನ್ನು ಪಡೆದಿದ್ದಾರೆ;

6) ಗೃಹ ನಿರ್ಮಾಣ ಮಾಡುವ ವೆಚ್ಚವನ್ನು ಆದಾಯ \ ಉಳಿತಾಯದ ಮೂಲದಿಂದ ಭರಿಸಲು ನಿರ್ದೇಶಕರು \ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರಿಂದ

ಎದುರುದಾರರು ಅನುಮತಿ ಪತ್ರಗಳನ್ನು ಪಡೆದಿದ್ದು, ಸದರಿ ಅನುಮತಿ ಪತ್ರಗಳಲ್ಲಿನ ಅಂಶಗಳಿಗೆ ವ್ಯತಿರಿಕ್ತ ಎಂಬಂತೆ ಬ್ಯಾಂಕ್‌ನಿಂದ ₹30 ಲಕ್ಷ ಸಾಲ ಪಡೆದು ಗೃಹ ನಿರ್ಮಾಣ ಮಾಡಿರುವುದಾಗಿ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹೇಳಿದ್ದಾರೆ. ಮುಂದುವರೆದು, ಮೇಲೆ ಹೇಳಿದ ನಿವೇಶನ ಸಂಖ್ಯೆ:60 ಎದುರುದಾರರ ಪತ್ನಿಯ ಹೆಸರಿಗೆ ಯಾವಾಗ ಖರೀದಿಯಾಗಿದೆ? ನಿವೇಶನವನ್ನು ಖರೀದಿ ಮಾಡಲು ಅವರಿಗಿದ್ದ ಆದಾಯದ ಮೂಲ ಯಾವುದು? ಎಂಬ ಬಗ್ಗೆ ದಾಖಲೆಗಳಿಲ್ಲ;

7) ₹6,61,686/- ಬ್ಯಾಂಕ್ ಸಾಲ ಪಡೆದು ಮತ್ತು ಉಳಿತಾಯದ ಹಣದಿಂದ ನ್ಯೂ ಫೋರ್ಡ್ ಫಿಗೋ ಕಾರನ್ನು ಖರೀದಿಸಲು ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರಿಂದ ಎದುರುದಾರರು ದಿ:05/04/13ರಂದು ಅನುಮತಿ ಪಡೆದಿದ್ದಾರೆಂದು ಅನುಮತಿ ಪತ್ರ ಸಂಖ್ಯೆ:ಮಮ\ಸಿಬ್ಬಂದಿಪ-1\54\11-12ರಲ್ಲಿ ಕಂಡು ಬಂದಿದೆ;

8) ಎದುರುದಾರರ ಹೆಸರಿನಲ್ಲಿರುವ ಮೇಲೆ ಹೇಳಿದ ಮೂರು ಸ್ಥಿರ ಸ್ವತ್ತುಗಳು ಮತ್ತು ತಮ್ಮ ಪತ್ನಿಯ ಹೆಸರಿನಲ್ಲಿರುವ ನಿವೇಶನ ಸಂಖ್ಯೆ:60ನ್ನು ಅರ್ಜಿಸುವ ಪೂರ್ವದಲ್ಲಿ ಹಾಗೂ ಗೃಹ ನಿರ್ಮಾಣಕ್ಕಾಗಿ ಬ್ಯಾಂಕಿನಿಂದ ₹30 ಲಕ್ಷ ಸಾಲವನ್ನು ಪಡೆಯುವ ಪೂರ್ವದಲ್ಲಿ ಎದುರುದಾರರು ಸೂಚಿತ ಪ್ರಾಧಿಕಾರದಿಂದ ಅನುಮತಿಯನ್ನು ಪಡೆಯದೇ, ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

5. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

6. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

7. ಅದಲ್ಲದೆ, ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ

ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**